ಕುಡಿಯುವ ನೀರಿನ ಯೋಜನೆಯಡಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 136 (135)
ಸದಸ್ಯರ ಹೆಸರು : ಶೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ)
ಉತ್ತರಿಸುವ ಸಚಿವರು : ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಪ್ರಶ್ನೆಗಳು:

ಅ) ಕುಡಿಯುವ ನೀರಿನ ಯೋಜನೆಗಳಾದ ಕಿರು ನೀರು ಸರಬರಾಜು ಯೋಜನೆಯ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಲು ಇಂಧನ ಇಲಾಖೆಯವರು ಸರ್ವೀಸ್ ಡಿಪಾಸಿಟ್ ಕಟ್ಟಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ ಸೂಕ್ತ ಅನುದಾನದ ಕೊರತೆಯಿಂದಾಗಿ ಸರ್ವೀಸ್ ಪಡೆಯಲು ವಿಳಂಬವಾಗುತ್ತಿದ್ದು, ಕೊಳವೆ ಬಾವಿಗಳಲ್ಲಿ ನೀರು ಸ್ಥಗಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇಂತಹ ಕುಡಿಯುವ ನೀರಿನ ಯೋಜನೆಯಡಿ ಕೊರೆಯಿಸಲಾಗುವ ಕೊಳವೆ ಬಾವಿಗಳಿಗೆ ವಿದ್ಯುತ್ ಸರ್ವೀಸ್ ನೀಡಲು ಇಂಧನ ಇಲಾಖೆಯಿಂದ ವಿನಾಯಿತಿ ಪಡೆಯಲು ಸರ್ಕಾರ ಆದೇಶ ಹೊರಡಿಸುವುದೇ?

ಉತ್ತರಗಳು:

ಅ) ಬಂದಿದೆ.

ಆ) ಕೊಳವೆ ಬಾವಿಗಳ ವಿದ್ಯುತ್ ಸಂಪರ್ಕ ಕಲ್ಪಿಸುವ ಸಲುವಾಗಿ ವಿದ್ಯುತ್ ಸಂಪರ್ಕ ಕಂಪನಿಗೆ ಪಂಚಾಯತ್ ರಾಜ್ ವಿಭಾಗಗಳಿಂದಲೇ, ನಿಯಮಾನುಸಾರ, ಅವಶ್ಯಕ ಶುಲ್ಕವನ್ನು

ಪಾವತಿಸಲಾಗುತ್ತಿದೆ. ಆದರೆ, ವಿದ್ಯುತ್ ಸರಬರಾಜು ಕಂಪನಿಗಳಿಂದ ವಿದ್ಯುತ್ ಸಂಪರ್ಕ ಕಲ್ಪಿಸುವುದು ವಿಳಂಬವಾಗುತ್ತಿದ್ದು, ಕೊಳವೆ ಬಾವಿಗಳಲ್ಲಿ ನೀರು ಸ್ಥಗಿತಗೊಳ್ಳುತ್ತಿದೆ.

ಇ) ಇಲಾಖೆ ಮುಖೇನವೇ ಸೆಲ್ಫ್ ಎಕ್ಸ್‌ಕ್ಯೂಷನ್ ಮಾಡುವ ಮೂಲಕ ಕುಡಿಯುವ ನೀರು ಯೋಜನೆಗಳನ್ನು ವಿದ್ಯುದ್ಧೀಕರಣಗೊಳಿಸಲು ದಿನಾಂಕ: 24.12.2011ರಲ್ಲಿ ಸುತ್ತೋಲೆ ಆದೇಶ ಹೊರಡಿಸಲಾಗಿದೆ.

ಕುಡಿಯುವ ನೀರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 137 (100)
ಸದಸ್ಯರ ಹೆಸರು : ಶೀ ಸುರೇಶ್‌ಗೌಡ (ನಾಗಮಂಗಲ)
ಉತ್ತರಿಸುವ ಸಚಿವರು : ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆಗಳು:

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹಾಗೂ ಸುತ್ತಮುತ್ತಲಿನ 49 ಗ್ರಾಮಗಳಿಗೆ ನದಿ ಮೂಲದಿಂದ ಶುದ್ಧ ಕುಡಿಯುವ ನೀರು ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ, ಈ ಯೋಜನೆ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳೇನು?

ಇ) ಈ ಯೋಜನೆಯನ್ನು ಯಾವಾಗ ಅನುಷ್ಠಾನಕ್ಕೆ ತರಲಾಗುವುದು?

ಉತ್ತರಗಳು:

ಅ) ಬಂದಿದೆ.

ಆ,ಇ) ಕೊಪ್ಪ ಹೋಬಳಿಯ 49 ಗ್ರಾಮಗಳಿಗೆ ಕೊಪ್ಪ ಕೆರೆಯಿಂದ ಶಾಶ್ವತ ಹಾಗೂ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ರೂ. 2670.00 ಲಕ್ಷಗಳ ಪ್ರಸ್ತಾವನೆಗೆ ದಿನಾಂಕ 01.10.2011 ರ SLSSC ಸಭೆಯಲ್ಲಿ ತಾತ್ವಿಕ ಒಪ್ಪಿಗೆ ದೊರೆತಿದೆ. ಸದರಿ ಯೋಜನೆಯ ವಿವರಣಾತ್ಮಕ ಅಂದಾಜುಪಟ್ಟಿ ತಯಾರಿಸಲಾಗುತ್ತಿದೆ.